ಕಾರಂಜಿಮಠದಲ್ಲಿ ಶಿವಾನುಭವ ಗೋಷ್ಠಿ ಹಾಗೂ ಪ್ರತಿಭಾ ಸನ್ಮಾನ ಸಮಾರಂಭ

ಬಸವಣ್ಣನವರ ವಚನಗಳು ಗೇಯತೆ ಪ್ರತಿಬಿಂಬಗಳು: ಸಾಹಿತಿ ಶಿರೀಷ ಜೋಶಿ

ಬೆಳಗಾವಿ ; ಬಸವಣ್ಣನವರಿಗೆ ಸಂಗೀತ ಜ್ಞಾನ ಅಪಾರವಾಗಿತ್ತು. ಅವರ ಹಲವಾರು ವಚನಗಳಲ್ಲಿ ಸಂಗೀತದ ಗೇಯತೆ ಹಾಸುಹೊಕ್ಕಾಗಿದೆ ಎಂದು ಹಿರಿಯ ಸಾಹಿತಿ ಶಿರೀಷ ಜೋಶಿ ಅವರು ಹೇಳಿದರು ಅವರು ಬೆಳಗಾವಿ ಶಿವಬಸವನಗರದಲ್ಲಿರುವ ಕಾರಂಜಿಮಠದಲ್ಲಿ 274ನೇ ಅನುಭಾವ ಗೋಷ್ಠಿ ಹಾಗೂ ಬಸವ ಜಯಂತಿ ಕಾರ್ಯಕ್ರಮದಲ್ಲಿ ಬಸವಣ್ಣನವರ ವಚನಗಳು ಹಾಗೂ ಸಂಗೀತ ವಿಷಯದ ಮೇಲೆ ಮಾತನಾಡಿದರು. ಅನೇಕ ಶರಣರಿಗೆ ಸಂಗೀತದ ಅಗಾಧವಾದ ಜ್ಞಾನವಿತ್ತು. ಅವರು ಉತ್ತಮ ಸಂಗೀತಗಾರರು ಆಗಿದದರು. ಅದರಲ್ಲಿ ಬಸವಣ್ಣವರ ವಚನಗಳು ಸಂಗೀತದ ನೆಲೆಯಲ್ಲಿ ಮನೋಜ್ಞವಾಗಿವೆ. ಅವರೇ ಅಂತಹ ಸಂಗೀತ ವಿಚಾರಗಳನ್ನು ವಚನಗಳಲ್ಲಿ ಹಂಚಿಕೊಂಡಿದ್ದಾರೆ. ಅಣ್ಣನವರ ವಚನಗಳನ್ನು ನಾಡಿನ ಶ್ರೇಷ್ಠ ಸಂಗೀತ ಗಾಯಕರು ಹಿಂದೂಸ್ಥಾನಿ ಹಾಗೂ ಕರ್ನಾಟಕ ಸಂಗೀತದಲ್ಲಿ ಹಾಡಿ ಅಮರವಾಗಿಸಿದ್ದಾರೆ. ವಚನ ಸಂಗೀತವನ್ನು ಜೀವಂತವಾಗಿಸುವ ಕೆಲಸ ಇಂದಿಗೂ ನಮ್ಮ ನಾಡಿನಲ್ಲಿ ಅವ್ಯಾಹತವಾಗಿ ಮುಂದುವರೆದಿದೆ. ವಚನ ಪರಂಪರೆಯನ್ನು ಜೀವಂತವಾಗಿ ಉಳಿಸುವುದು ನಮ್ಮೆಲ್ಲರ ಕರ್ತವ್ಯ ಎಂದು ಹೇಳಿದರು.

ಮುಖ್ಯ ಅತಿಥಿಗಳಾಗಿ ಹಿರಿಯ ನ್ಯಾಯವಾದಿ ಎಂ.ಬಿ.ಜೀರಲಿ ಆಗಮಿಸಿದ್ದರು. ಅವರು ಮಾತನಾಡಿ ಬಸವಣ್ಣನವರ ವಿಚಾರಗಳು ಇಂದಿಗೂ ಪ್ರಸ್ತುತ. ಸಮಾಜದಲ್ಲಿ ಇಂದಿಗೂ ಅಸಮಾನತೆಯು ಎದ್ದು ತೋರುತ್ತಿದೆ. ನಮ್ಮಲ್ಲಿರುವ ಮೌಢ್ಯತೆಗಳನ್ನು ತೊಡೆದುಹಾಕಿ ಜೀವನವನ್ನು ರೂಪಿಸಿಕೊಳ್ಳಬೇಕೆಂದು ಹೇಳಿದರು.

ಸಮಾರಂಭದ ದಿವ್ಯ ಸಾನ್ನಿಧ್ಯವನ್ನು ಪೂಜ್ಯ ಗುರುಸಿದ್ಧ ಮಹಾಸ್ವಾಮೀಜಿಯವರು ವಹಿಸಿ ಬಸವಣ್ಣನವರ ವಚನಗಳನ್ನು ಓದಿದರೆ ಸಾಲದು ಅವುಗಳನ್ನು ಅನುಷ್ಠಾನಕ್ಕೆ ತರುವಂತಾಗಬೇಕು. ನಮ್ಮ ನಡೆನುಡಿ ಒಂದೇ ಆಗಿರಬೇಕು. ಕಾಯಕ–ದಾಸೋಹ–ಪ್ರಸಾದ ಸಿದ್ಧಾಂತಗಳನ್ನು ಕಟ್ಟುನಿಟ್ಟಾಗಿ ಅನುಷ್ಠಾನಕ್ಕೆ ತರಬೇಕೆಂದು ಕರೆನಡಿದರು.

ವೇದಿಕೆಯ ಮೇಲೆ ನೂತನ ಪೀಠಾಧಿಕಾರಿ ಡಾ.ಶಿವಯೋಗಿ ದೇವರು ಉಪಸ್ಥಿತರಿದ್ದರು. ಸಹನಾ ಪಟಗುಂದಿ, ಲಾವಣ್ಯ ಜಗಜಂಪಿ ಹಾಗೂ ಲತಿಕಾ ಜಗಜಂಪಿ ಪ್ರಾರ್ಥಿಸಿದರು. ಶಶಿಕಲಾ ಹುಬ್ಬಳ್ಳಿ ನರೂಪಿಸಿದರು, ನ್ಯಾಯವಾದಿ ವಿ.ಕೆ.ಪಾಟೀಲ ವಂದಿಸಿದರು. ಇದೇ ಸಂದರ್ಭದಲ್ಲಿ ದ್ವಿತೀಯ ಪಿಯುಸಿಯಲ್ಲಿ ಅತೀ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳಾದ ಅಂಕಿತಾ ಅಪ್ಪಯ್ಯ ಮಠದ, ಸಮೀಕ್ಷಾ ಸುರೇಶ ಯಾದವ, ವೈಷ್ಣವಿ ಜಗದೀಶ ಪಾಟೀಲ, ಪ್ರೀತಿ ಕಮತ, ರಾಹುಲ್ ರಮೇಶ ಮಗದುಮ್ಮ ಅವರಿಗೆ ಪ್ರತಿಭಾ ಪುರಸ್ಕಾರ ನೀಡಿ ಸತ್ಕರಿಸಲಾಯಿತು.

ಯಮಕನಮರಡಿ: ಸಮೀಪದ ಹಳೆ ವಂಟಮೂರಿಯ ಸರಕಾರಿ ಶಾಲೆಯಲ್ಲಿ ಚಿಕ್ಕೊಡಿ ಲೋಕಸಭಾ ಅಭ್ಯರ್ಥಿ ಕು॥ಪ್ರಿಯಾಂಕಾ ಜಾರಕಿಹೊಳಿ ಮತ ಚಲಾಯಿಸಿದರು,

ಕುಟುಂಬ ಸಮೇತ ಬಂದು ಮತ ಚಲಾಯಿಸಿದ ಸಚಿವೆ ಲಕ್ಷ್ಮೀ ಹೆಬ್ಬಾಳಕರ್

ಈ ಬಾರಿ ಜಿಲ್ಲೆಯಲ್ಲಿ ಬದಲಾವಣೆ ಗ್ಯಾರಂಟಿ ಎಂದ ಸಚಿವರು

ಬೆಳಗಾವಿ: ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರಾದ ಲಕ್ಷ್ಮೀ ಹೆಬ್ಬಾಳಕರ್ ಅವರು, ವಿಜಯನಗರದ ಸರಕಾರಿ ಮರಾಠಿ ಪ್ರಾಥಮಿಕ ಪಾಠ ಶಾಲೆಯ ಬೂತ್ ನಂಬರ್ 61ರಲ್ಲಿ ಕುಟುಂಬ ಸಮೇತ ಆಗಮಿಸಿ ಮತದಾನ ಮಾಡಿದರು.

ಸಚಿವರ ಪುತ್ರ ಹಾಗೂ ಕಾಂಗ್ರೆಸ್ ಅಭ್ಯರ್ಥಿ ಮೃಣಾಲ್ ಹೆಬ್ಬಾಳಕರ್, ಸೊಸೆ ಡಾ.ಹಿತಾ, ಸಚಿವರ ತಾಯಿ ಗಿರಿಜಾ ಹಟ್ಟಿಹೊಳಿ, ಸಹೋದರ ಹಾಗೂ ವಿಧಾನ ಪರಿಷತ್ ಸದಸ್ಯರಾದ ಚನ್ನರಾಜ ಹಟ್ಟಿಹೊಳಿ ಅವರ ಪತ್ನಿ ಜೊತೆಗೂಡಿ ಮತದಾನ ಮಾಡಿದರು.

ಬಳಿಕ ಮಾತನಾಡಿದ ಸಚಿವೆ ಲಕ್ಷ್ಮೀ ಹೆಬ್ಬಾಳಕರ್, ಭಾರತ ಪ್ರಜಾಪ್ರಭುತ್ವದ ಅತಿದೊಡ್ಡ ಹಬ್ಬ ಮತದಾನದ ದಿನ. ಎಲ್ಲರೂ ತಪ್ಪದೇ ಮತದಾನ ಮಾಡಬೇಕು. ಉತ್ತಮ ಜನ ಪ್ರತಿನಿಧಿಯನ್ನು ಆಯ್ಕೆ ಮಾಡಬೇಕು ಎಂದರು.

ಬೆಳಗಾವಿ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಮೃಣಾಲ್ ಹೆಬ್ಬಾಳಕರ್ ಪರ ಉತ್ತಮ ಅಲೆಯಿದೆ. ಕ್ಷೇತ್ರದಲ್ಲಿ ಜಯ ದಾಖಲಿಸುವ ಮೂಲಕ ಕಾಂಗ್ರೆಸ್ ಹೊಸ ಇತಿಹಾಸ ಸೃಷ್ಟಿಸಲಿದೆ. ನನ್ನ ಸಹೋದರ, ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರ ಪಡೆಯೇ ನನ್ನ ದೊಡ್ಡ ಶಕ್ತಿ.

ಅರಭಾವಿ, ಗೋಕಾಕ್, ಬೆಳಗಾವಿ ಉತ್ತರ ಕ್ಷೇತ್ರಗಳಲ್ಲೂ ಕಾಂಗ್ರೆಸ್ ಮುನ್ನಡೆಗಳಿಸಲಿದೆ. ಅಜ್ಜಯ್ಯನವರ (ನೊಣವಿನಕೆರೆಯ ಶ್ರೀ ಕಾಡಾಸಿದ್ದೇಶ್ವರದ ಸ್ವಾಮೀಜಿಗಳು) ಆಶೀರ್ವಾದವಿದೆ ಎಂದು ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ಹೇಳಿದರು.

ಕುಟುಂಬ ಸಮೇತ ಬಂದು ಮತಹಾಕಿರುವೆ. ಪ್ರತಿಯೊಬ್ಬರೂ ಬಂದು ಮತ ಹಾಕಬೇಕು. ಈ ಬಾರಿ ನೂರಕ್ಕೆ ನೂರರಷ್ಟು ಬೆಳಗಾವಿ ಕ್ಷೇತ್ರದಲ್ಲಿ ಕಾಂಗ್ರೆಸ್ ಪಕ್ಷ ಗೆಲುವು ದಾಖಲಿಸಲಿದೆ ಎಂದು ಕಾಂಗ್ರೆಸ್ ಅಭ್ಯರ್ಥಿ ಮೃಣಾಲ್ ಹೆಬ್ಬಾಳಕರ್ ಹೇಳಿದರು.

ಬೆಳಗಾವಿ ಲೋಕಸಭೆ ಕ್ಷೇತ್ರದಲ್ಲಿ ಕಾಂಗ್ರೆಸ್ ಗೆಲುವು ಗ್ಯಾರಂಟಿ. ಒಗ್ಗಟ್ಟಿನಿಂದ ಕೆಲಸ ಮಾಡಿದ್ದೇವೆ. ಚಿಕ್ಕೋಡಿ, ಬೆಳಗಾವಿ ಎರಡು ಕ್ಷೇತ್ರ ಗಳಲ್ಲೂ ಕಾಂಗ್ರೆಸ್ ಅಭ್ಯರ್ಥಿಗಳು ಜಯ ದಾಖಲಿಸಲಿದ್ದು, ಬೆಳಗಾವಿ ಸ್ವಾಭಿಮಾನಕ್ಕೆ ಗೆಲುವು ಸಿಗಲಿದೆ ಎಂದು ವಿಧಾನ ಪರಿಷತ್ ಸದಸ್ಯರಾದ ಚನ್ನರಾಜ ಹಟ್ಟಿಹೊಳಿ ವಿಶ್ವಾಸ ವ್ಯಕ್ತಪಡಿಸಿದರು.

ಮೂಡಲಗಿ: ಬೆಳಗಾವಿ ಲೇಕವ್ಯೂ ಆಸ್ಪತ್ರೇಯ ವೈದ್ಯ ಡಾ.ಗಿರೀಶ ಸೋನವಾಲಕರ ಅವರು ತಮ್ಮ ತಾಯಿ ಅವರೊಂದಿಗೆ ಲೋಕಸಭಾ ಚುನಾವಣೆಯಲ್ಲಿ ಮೂಡಲಗಿ ಪಟ್ಟಣದ 53ನೇ ಮತಗಟ್ಟೆಯಲ್ಲಿ ಸರದಿ ಸಾಲಿನಲ್ಲಿ ನಿಂತ ಮತ ಚಲಾಯಿಸಿದರು.

ಮೂಡಲಗಿ: ಮೂಡಲಗಿ ಪಟ್ಟಣದ 55ನೇ ಮತಗಟ್ಟೆಯಲ್ಲಿ ಸಿರಿಲ ಚಂದ್ರು ಗಾಣೇಗ ಪ್ರಥಮ ಬಾರಿಗೆ ಮತ ಚಲಾಯಿಸಿದರು.

ಅಪರಿಚಿತ ಶವ ಪತ್ತೆಗೆ ಮನವಿ

ವಿಜಯಪುರ ಏ–: – ವಿಜಯಪುರ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಜರುಗಿದ ರಸ್ತೆ ಅಪಘಾತದಲ್ಲಿ ಅಪರಿಚಿತ ವ್ಯಕ್ತಿ ಮೃತಪಟ್ಟಿದ್ದು, ಈ ಬಗ್ಗೆ ಸಂಚಾರ ಪೊಲೀಸ್ ಠಾಣೆ ಗುನ್ನೆ ನಂಬರ 90/2024 ಕಲಂ 279.304(ಎ) ಐಪಿಸಿ ಪ್ರಕಾರ ಪ್ರಕರಣ ದಾಖಲಾಗಿದೆ. ಅಪಘಾತ ದಲ್ಲಿ ಮೃತನಾದ ವ್ಯಕ್ತಿಯ ಹೆಸರು ವಿಳಾಸ ತಿಳಿದು ಬಂದಿಲ್ಲ, ಅಂದಾಜು 37 ವರ್ಷದವನಾಗಿದ್ದು, 5.6 ಪೂಟ ಎತ್ತರವಾಗಿದ್ದು, ಉದ್ದನೆಯ ಮುಖ ಸಾದಗಪ್ಪು ಬಣ್ಣ, ಬಿಳಿ ಕಪ್ಪು ಬಣ್ಣದ ಪೂಲ್ ತೋಳಿನ ಚೆಕ್ ಶರ್ಟ ಬಿಳಿ ಬಣ್ಣದ ಹಾಫ್ ಶರ್ಟ. ಕಪ್ಪು ಬಣ್ಣದ ಜೀನ್ಸ ಪ್ಯಾಂಟ ಹಾಕಿದ್ದು ತಲೆಯಲ್ಲಿ ಕಪ್ಪು ಕೂದಲು ಇರುತ್ತದೆ. ಈ ರೀತಿ ಚಹರೆ ಪಟ್ಟಿಯುಳ್ಳ ವ್ಯಕ್ತಿಯ ಬಗ್ಗೆ ಯಾವುದಾದರು ಮಾಹಿತಿ ಕಂಡು ಬಂದಲ್ಲಿ ಕೂಡಲೇ ಸಂಚಾರಿ ಪಿ.ಎಸ್ ಫೋನ ನಂ: 08352–252600 ಅಥವಾ 9480804246ಪೊಲೀಸ ಕಂಟ್ರೋಲ ರೂಂ ನಂ: 08352–250844–250751 ಸಂಪರ್ಕಿಸಲು ವಿಜಯಪುರ ಸಂಚಾರ ಪೊಲೀಸ್ ಠಾಣೆಯ ನಿರೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬಳ್ಳಾರಿಯ ಸತ್ಯಹರಿಶ್ಚಂದ್ರ ನಗರದಲ್ಲಿರುವ ಗಂಗೋತ್ರಿ ಶಾಲೆಯ 54ನೇ ಮತಗಟ್ಟೆ ಕೇಂದ್ರಕ್ಕೆ ಭಗತ್ ಸಿಂಗ್ ನಗರದ 101 ವರ್ಷ ಪೂರೈಸಿದ ಗೋವಿಂದಮ್ಮ ಎನ್ನುವ ವೃದ್ಧೆ ತಮ್ಮ ಹಕ್ಕು ಚಲಾಯಿಸಿದರು. ಮತಗಟ್ಟೆ ಕೇಂದ್ರದ ಬಿಎಲ್ಓ ಎಸ್.ಅರ್ಕಾಣಿ ಅವರು ಈ ಹಿರಿಯ ಜೀವಕ್ಕೆ ಮತದಾನ ಮಾಡಲು ಬೇಕಾದ ದಾಖಲೆಗಳ ಪರಿಶೀಲನೆ ನಡೆಸಿ ಅಗತ್ಯ ಸಹಕಾರ ನೀಡಿದರು.

ಕಾಂಗ್ರೇಸ್ಸ್ ಅಭ್ಯರ್ಥಿ ಕು॥ಪ್ರಿಯಾಂಕಾ ಜಾರಕಿಹೊಳಿ ಹಳೆ ವಂಟಮೂರಿಯಲ್ಲಿ ಮತದಾನ

ಯಮಕನಮರಡಿ:–ಚಿಕ್ಕೋಡಿ ಮತಕ್ಷೇತ್ರದ ವ್ಯಾಪ್ತಿಯ ಹಳೆ ವಂಟಮೂರಿಯ ಸರಕಾರಿ ಕನ್ನಡ ಕಿರಿಯ ಪ್ರಾಥಮಿಕ ಶಾಲೆಯ ಮತಗಟ್ಟೆ ಸಂಖ್ಯೆ–95 ರಲ್ಲಿ ಚಿಕ್ಕೋಡಿ ಲೋಕಸಭಾ ಕ್ಷೇತ್ರದ ಕಾಂಗ್ರೇಸ್ಸ್ ಅಭ್ಯರ್ಥಿ ಕು॥ಪ್ರಿಯಾಂಕಾ ಜಾರಕಿಹೊಳಿ ಸರತಿಯಲ್ಲಿ ನಿಂತು ಸರಳವಾಗಿ ತಮ್ಮ ಹಕ್ಕನ್ನು ಚಲಾಯಿಸಿದರು,

ತದ ನಂತರ ಯಮಕನಮರಡಿ ಗ್ರಾಮದ ಮತಗಟ್ಟೆಗೆ ಭೆಟ್ಟಿ ನೀಡಿದ ಅವರು ಮಾಧ್ಯಮದವರೊಂದಿಗೆ ಮಾತನಾಡಿ ಚಿಕ್ಕೋಡಿ ಲೋಕಸಭೆಯ 8 ಕ್ಷೇತ್ರಗಳಲ್ಲಿ ಮತದಾರ ಪ್ರಭುಗಳು ಉತ್ತಮವಾಗಿ ಪ್ರತಿಕ್ರೀಯೇ ವ್ಯಕ್ತಪಡಿಸುತ್ತಿದ್ದಾರೆ, 8 ಕ್ಷೇತ್ರಗಳಲ್ಲಿ ಮತದಾನ ಇರುವುದರಿಂದ ಎಲ್ಲ ಮತಗಟ್ಟೆಗಳಿಗೆ ಭೆಟ್ಟಿ ನೀಡುವುದಾಗಿ ತಿಳಿಸಿದ ಅವರು,

ನಾನು ಪ್ರಚಾರಕ್ಕೆ ತೆರಳಿದಾಗ ನನ್ನನ್ನೂ ಮನೆ ಮಗಳಂತೆ ನೊಡಿಕೊಂಡು ಉತ್ತಮವಾಗಿ ಪ್ರತಿಕ್ರಿಯಿಸಿದ್ದಾರೆ,

ನಾನು ಹೆಚ್ಚು ಅಂತರದಿಂದ ಗೆಲುವು ಸಾಧಿಸುತ್ತೆನೆಂದು ಸೌಮ್ಯದಿಂದ ಮುಗುಳ್ನಗೆ ಬಿರುತ್ತಾ ನುಡಿದರು,

ಎಲ್ಲರಿಗೂ ಕೃತಜ್ಞತೆ:–ನೆತ್ತಿ ಸುಡುವ ಬಿಸಿಲನ್ನು ಲೆಕ್ಕಿಸದೆ ಸಚಿವರು ಜಿಲ್ಲೆಯ ಕಾಂಗ್ರೇಸ್ಸ್ ಪಕ್ಷದ ಶಾಸಕರು, ರಾಜ್ಯದ ನಾಯಕರು, ಮನೆ ಮನೆಗೆ ತೆರಳಿ ಗ್ಯಾರಂಟಿ ಕಾರ್ಡಗಳನ್ನು ವಿತರಿಸುವ ಮೂಲಕ ನನ್ನ ಪರವಾಗಿ ಮತಯಾಚಿಸಿದ್ದಾರೆ, ಕಾರ್ಯಕರ್ತರು ಸೇರಿದಂತೆ 8 ಕ್ಷೇತ್ರದ ಜನ ನನಗೆ ನಡಿರುವ ಬೆಂಬಲ ಪ್ರೀತಿ, ವಿಶ್ವಾಸ ಕ್ಕೆ ನಾನೆಂದಿಗೂ ಋಣಿಯಾಗಿದ್ದೆನೆ

ಅವರೆಲ್ಲರಿಗೂ ಕೃತಜ್ಞತೆ ಅರ್ಪಿಸಿದರು,

ಈ ಸಂದರ್ಭದಲ್ಲಿ ಪತ್ರಕರ್ತರು ಕೆಳಿದ ಪ್ರಶ್ನೆಗಳಿಗೆ ಉತ್ತರಿಸಿ ಪಕ್ಷೇತರ ಅಭ್ಯರ್ಥಿಯಿಂದ ಕಾಂಗ್ರೇಸ್ಸ್ ಪಕ್ಷಕ್ಕೆ ಮತ ವಿಭಜನೆಯಾಗುವ ಸಾಧ್ಯತೆ ಬಗ್ಗೆ ಚರ್ಚೆಯಾಗುತ್ತಿದೆ ಎಂದಾಗ ಪಕ್ಷೇತರ ಅರ್ಭಯರ್ಥಿಯಿಂದ ನನಗೆ ಯಾವ ಹಾನಿಯೂ ಇಲ್ಲಾ ಚಿಕ್ಕೋಡಿ ಮತಕ್ಷೇತ್ರದ ವ್ಯಾಪ್ತಿಯ ಎಲ್ಲ ಗ್ರಾಮಗಳ ಜನ ನನ್ನನ್ನೂ ಮನೆ ಮಗಳಂತೆ ನೋಡಿಕೊಂಡು ನನ್ನ ಗೆಲುವುಗಾಗಿ ಶ್ರಮಿಸಿ ಬೆಂಬಲ ಸೂಚಿಸುತ್ತಿದ್ದಾರೆ ಎಂದ ಅವರು ಚಿಕ್ಕೊಡಿ ಲೋಕಸಭಾ ಕ್ಷೇತ್ರದಲ್ಲಿ 1 ಲಕ್ಷ ಅಂತರದ ಮತಗಳಿಂದ ಗೆಲ್ಲುತ್ತೆವೆ ಎಂದರು,

ಮತದಾರರು ಬಿಸಿಲಿನಲ್ಲೂ ಸರತಿಸಾಲುಗಳಲ್ಲಿ ನಿಂತು ಮತದಾನ ಮಾಡುತ್ತಿದ್ದು ಸುಡು ಬಿಸಿಲನ್ನು ಲೆಕ್ಕಿಸದೇ ಜನ ಮತದಾನ ಮಾಡಿ ಬೆಂಬಲ ಸೂಚಿಸುತ್ತಿದ್ದಾರೆ ಎಂದರು,

ಈ ಸಂದರ್ಭದಲ್ಲಿ ಕಿರಣಸಿಂಗ ರಜಪೂತ, ಈರಣ್ಣಾ ಬಿಸಿರೊಟ್ಟಿ, ರವಿಂದ್ರ ಜಿಂಡ್ರಾಳಿ, ಮಹಾಂತೇಶ ಮಗದುಮ್ಮ, ಶೌಕತ ಖಾಜಿ, ಅಸ್ಲಂ ಪಕಾಲಿ, ರಾಜೆಸಾಬ ಫಣಿಬಂದ,

ಅಭೀಜಿತ ಪಾಟೀಲ, ಸಿದ್ದಪ್ಪಾ ಶಿಳ್ಳಿ, ಉಮೇಶ ಅವಲಕ್ಕಿ, ಗಿರೀಶ ಮಿಶ್ರಕೋಟಿ, ಮುಂತಾದವರು ಉಪಸ್ಥಿತರಿದ್ದರು,

ನರಸಾಪುರ್ ಲೋಕಸಭಾ ಚುನಾವಣೆಯ ಮತಗಟ್ಟೆಗೆ ವೃದ್ಧರಾದ ತುಪ್ಪವ್ವ ಗೋಸಲ ಅವರು ಮತಗಟ್ಟೆಗೆ ಆಗಮಿಸಿ ಮತದಾನ ಮಾಡಿ ಸಂಭ್ರಮಿಸಿದರು

ಮೊದಲ ಬಾರಿಗೆ ಮತದಾನ ಮಾಡಿದ ಯುವತಿ

ಸವದತ್ತಿ : ಬೆಳಗಾವಿ ಲೋಕಸಭಾ ಕ್ಷೇತ್ರಕ್ಕೆ ಮತದಾನ ಆರಂಭವಾಗಿದೆ. ಬೆಳಿಗ್ಗೆಯಿಂದಲೇ ಮತಗಟ್ಟೆಗಳಲ್ಲಿ ಜನಜಂಗುಳಿ ಕಂಡು ಬಂದಿದೆ.

ಇದೆಲ್ಲದರ ಮದ್ಯೆ ಮೊದಲ ಬಾರಿಗೆ ಮತದಾನ ಮಾಡಿದ ಯುವಕ, ಯುವತಿಯರು ಸಂಭ್ರಮದಿಂದ ಪ್ರಜಾಪ್ರಭುತ್ವದ ಹಬ್ಬದಲ್ಲಿ ಪಾಲ್ಗೊಂಡಿದ್ದಾರೆ.

ಸವದತ್ತಿ ಮತಗಟ್ಟೆಯಲ್ಲಿ ಸೌಮ್ಯಾ ಕಳಕಪ್ಪ ಹುಲ್ಲೂರ ಮೊದಲ ಬಾರಿಗೆ ಮತದಾನ ಮಾಡಿದ್ದಾಳೆ. ಪ್ರಜಾಪ್ರಭುತ್ವದ ಅತ್ಯಂತ ದೊಡ್ಡ ಹಬ್ಬದಲ್ಲಿ ಮೊದಲ ಬಾರಿಗೆ ಹಕ್ಕು ಚಲಾಯಿಸಿದ್ದೇನೆ. ನನಗೆ ಅತ್ಯಂತ ಖುಷಿ ಕೊಟ್ಟಿದ ದಿನ ಎಂದು ಹೇಳಿದ ಸೌಮ್ಯಾ, ಬಿಸಿಲು ಇದೆ ಎಂದು ಹೇಳಿ ಮನೆಯಲ್ಲಿ ಕುಳಿತುಕೊಳ್ಳಬೇಡಿ, ಮತಗಟ್ಟೆಗೆ ಬಂದು ತಮ್ಮ ಹಕ್ಕು ಚಲಾಯಿಸಿ ಎಂದು ಮನವಿ ಮಾಡಿದ್ದಾಳೆ. ಕೇವಲ ವಾಟ್ಸಪ್, ಫೇಸ್ ಬುಕ್ ನಲ್ಲಿ ದೇಶದ ಬಗ್ಗೆ ಚಿಂತೆ ಮಾಡುವ ಬುದ್ದಿವಂತರು, ಮತ ಚಲಾಯಿಸಲು ಬರಲ್ಲ. ಮೊನ್ನೆ ಬೆಂಗಳೂರಿನಲ್ಲಿ ನಡೆದ ಮೊದಲ ಹಂತದ ಮತದಾನವೆ ಸಾಕ್ಷಿ ಎಂದಿದ್ದಾರೆ. ಮತದಾನದ ದಿನ ರಜೆ ದಿನ ಎಂದು ತಿಳಿದು ಮನೆಯಲ್ಲಿ ಕುಳಿತುಕೊಳ್ಳದೆ, ಮತಗಟ್ಟೆಗೆ ಬಂದು ಮತ ಚಲಾಯಿಸಿ ಎಂದು ಸೌಮ್ಯಾ ಹುಲ್ಲೂರ ಮನವಿ ಮಾಡಿದ್ದಾಳೆ.

ಗದಗ : ನಗರದ ಗಣ್ಯ ವರ್ತಕರಾದ ಬಲರಾಮ ಬಸವಾ ಅವರ ಮಾತೋಶ್ರೀ ತಿಪ್ಪುಬಾಯಿ ಬಸವಾ 90ರ ಇಳಿವಯಸ್ಸಿನಲ್ಲೂ ಉತ್ಸಾಹದಿಂದ ತಮ್ಮ ಪುತ್ರನೊಂದಿಗೆ ಮತಗಟ್ಟೆಗೆ ಆಗಮಿಸಿ ಲೋಕಸಭಾ ಚುನಾವಣೆಗೆ ಮತದಾನ ಮಾಡುವ ಮೂಲಕ ತಮ್ಮ ಕರ್ತವ್ಯ ನಿರ್ವಹಿಸಿದರು.

ಯರಗಟ್ಟಿ : ಬಿರುಸಿನ ಮತದಾನ ನಡೆಯುತ್ತಿದೆ. ಜನಸಾಮಾನ್ಯರು ಸೇರಿದಂತೆ ರಾಜಕಾರಣಿಗಳು ಮತಗಟ್ಟೆಗೆ ಆಗಮಿಸಿ ತಮ್ಮ ಹಕ್ಕು ಚಲಾಯಿಸುತ್ತಿದ್ದಾರೆ. ಇದರ ನಡುವೆ ಸ್ಥಳಿಯ ಮಳಿಮಲ್ಲೇಶ್ವರ ಮಠದ ಚಂದ್ರಶೇಖರ ಶಿವಾಚಾರ್ಯ ಶ್ರೀಗಳು ಮತ ಚಲಾಯಿಸಿದರು.

ಸಮೀಪದ ಸತ್ತಿಗೇರಿ ಗ್ರಾಮದ ಕರ್ನಾಟಕ ಪಬ್ಲಿಕ್ ಶಾಲೆಯ ಮತಗಟ್ಟೆಯಲ್ಲಿ ಅವರು ವೋಟ್ ಮಾಡಿದರು. ಬಳಿಕ ಮಾತನಾಡಿದ ಶ್ರೀಗಳು, "ಮತದಾನ ಎನ್ನುವುದು ಯೋಗ್ಯರಿಗೆ ಮತ ನೀಡುವಂಥದ್ದು. ಆಮಿಳಕ್ಕೆ ಬಿದ್ದು ವೋಟ್ ಮಾರಿಕೊಳ್ಳಬಾರದು. ಯಾರಿಗೆ ಮತ ಕೊಡುತ್ತಿದ್ದೇವೆ, ಏಕೆ ಮತದಾನ ಮಾಡುತ್ತಿದ್ದೇವೆ ಎನ್ನುವ ಬಗ್ಗೆ ಅರಿವಿರಬೇಕು. ಯೋಗ್ಯರಿಗೆ ಮತ ನೀಡಬೇಕು. ಐದು ವರ್ಷಗಳಿಗೊಮ್ಮೆ ಸಿಗುವ ಅವಕಾಶವನ್ನು ಯಾರೂ ಕಳೆದುಕೊಳ್ಳಬಾರದು" ಎಂದು ಮನವಿ ಮಾಡಿದರು.

ಯಮಕನಮರಡಿ: ಸಮೀಪದ ಹತ್ತರಗಿ ಹರಿಮಂದಿರದ ಡಾ॥ಆನಂದಮಹಾರಾಜ ಗೋಸಾವಿಯವರು ಹತ್ತರಗಿಯಲ್ಲಿ ಮತದಾನ ಮಾಡಿದರು

GADI KANNADIGA,kannada daily, printed, published , edited, & woned by murugesh b.shivapuji ,printed ,plot no:12,sy no:174/3b,press colony,kuvempu nagar, post:hindalaga-591108,Tq & Dt:belgaum, And published at plot no:12,sy no:174/3b,press colony,kuvempu nagar,post:hindalaga-591108,Tq & Dt:belgaum, karnataka, RNI NO:KAR KAN/2003/10452. Permission to post at Belagavi, Kacheri post office Belagavi. No:PMG/KA/NK/BM/743/24-26